

ಜನಗಳ
ಮನ

ವಿಶ್ವೇಶ್ವರ ಭಟ್

# ಇಂಥವರಿಗೂ ಬಿಜೆಪಿ ಟಿಕೆಟ್ ನೀಡಲಿ

ಸಾಫ್ಟ್‌ವೇರ್ ಎಂಜಿನಿಯರ್‌ಗಳೆಲ್ಲ ಒಂದೋ ಅಮೆರಿಕ ಸೇರುತ್ತಾರೆ, ಇಲ್ಲವೇ ಕಂಪ್ಯೂಟರ್ ಕಂಪನಿ ಸೇರುತ್ತಾರೆ. ಆದರೆ ಯಾರೂ ರಾಜಕೀಯ ಮಾತ್ರ ಸೇರೊಲ್ಲ. ಅಮೆರಿಕ ಸೇರಿದವರು ಹಾಗೂ ಕಂಪ್ಯೂಟರ್ ಕಂಪನಿ ಸೇರಿದವರು ಭಾರತ ಹೇಗೆ ಸರಿಯಿಲ್ಲ, ನಮ್ಮ ವ್ಯವಸ್ಥೆ ಸಂಪೂರ್ಣ ಬದಲಾಗಬೇಕಾದರೆ ಏನು ಮಾಡಬೇಕು, ವ್ಯವಸ್ಥೆಯಲ್ಲಿ ಯಾವ್ಯಾವ ದೋಷಗಳಿವೆ, ಭಾರತವೇಕೆ ಅಮೆರಿಕದ ಹಾಗೆ ಇಲ್ಲ, ಟ್ರಾಫಿಕ್ ಜಾಮ್, ಭ್ರಷ್ಟಾಚಾರವೇ ಎಲ್ಲ ಅನಿಷ್ಟಗಳಿಗೆ ಕಾರಣ ಎಂದೆಲ್ಲ ತಮ್ಮದೇ ಧಾಟಿಯಲ್ಲಿ ವಾದ ಮಾಡುತ್ತಾರೆ, ಷರಾ ಗೀಚುತ್ತಾರೆ. ಆದರೆ ಅವರ್‍ಯಾರೂ ವ್ಯವಸ್ಥೆ ಸರಿಪಡಿಸಲು ಮುಂದೆ ಬರುವುದಿಲ್ಲ. ರಾಜಕಾರಣಿಗಳನ್ನು ದೂರುತ್ತಾರೆ. ಆದರೆ ರಾಜಕಾರಣಕ್ಕೆ ಬನ್ನಿ ಅಂದ್ರೆ ಯಾರೂ ಮುಂದೆ ಬರೊಲ್ಲ. ಅದು ನಮಗೆ ಹೇಳಿ ಮಾಡಿಸಿದ ಕ್ಷೇತ್ರ ಅಲ್ಲ ಅಂತ ಮೂಗು ಮುರಿಯುತ್ತಾರೆ.



ಹೀಗೆ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಅಮೆರಿಕ ಸೇರಿ, ಅಲ್ಲಿನ ಬಹುರಾಷ್ಟ್ರೀಯ ಕಂಪ್ಯೂಟರ್ ಕಂಪನಿಯನ್ನು ಸೇರಿದ ಜನಾರ್ಧನ ಸ್ವಾಮಿಯವರು ಅವೆಲ್ಲವನ್ನೂ ಬಿಟ್ಟು ಈಗ ರಾಜಕೀಯ ಸೇರಿದ್ದಾರೆ, ಬಿಜೆಪಿ ಸೇರಿದ್ದಾರೆ.

ವಿಶ್ವದ ಸಿಲಿಕಾನ್ ಕಣಿವೆ ಎಂದು ಕರೆಯಿಸಿಕೊಳ್ಳುವ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಪ್ರತಿಷ್ಠಿತ ಸನ್ ಮೈಕ್ರೋಸಿಸ್ಟಮ್ಸ್ ಕಂಪನಿಯಲ್ಲಿ ಕೆಲಸ ಮಾಡುವುದೇ ಅಗ್ಗಳಿಕೆ ಮಾತು. ಜಗತ್ತಿನ most preferred employer ಎಂದು ಈ ಕಂಪನಿಯನ್ನು ಪರಿಗಣಿಸುವುದುಂಟು. ಜನಾರ್ಧನ ಸ್ವಾಮಿ ಅಲ್ಲಿ ಮುಖ್ಯ ಎಂಜಿನಿಯರ್ ಆಗಿದ್ದರು. ಸುಮಾರು ಐವತ್ತು ಸಾವಿರ ಉದ್ಯೋಗಿಗಳಿರುವ ಆ ಕಂಪನಿಯಲ್ಲಿ ಮುಖ್ಯ ಎಂಜಿನಿಯರ್ ಆಗಿದ್ದವರು ಕೇವಲ ಎಂಟು-ಹತ್ತು ಮಂದಿ. ಸ್ವಾಮಿಯವರು ಅವರಲ್ಲೊಬ್ಬರು. ಆ ಕಂಪನಿಯಲ್ಲಿ ಅವರು ಎಂಜಿನಿಯರ್‌ಗಳ ದೊಡ್ಡ ತಂಡಕ್ಕೆ ನಾಯಕರಾಗಿದ್ದರು. ಅತ್ಯಂತ ಆಧುನಿಕ ತಾಂತ್ರಿಕ ವಿಷಯವಾದ ಚಿಪ್ ಡಿಸೈನ್‌ನಲ್ಲಿ ಸಂಶೋಧನೆ ಮಾಡಿ ಅಮೆರಿಕ ಸರಕಾರದಿಂದ ಪೇಟೆಂಟ್ ಸಹ ಗಳಿಸಿದರು. ಸ್ವಾಮಿಯವರ ಇನ್ನೂ ಕೆಲವು ಸಂಶೋಧನೆಗಳು ಪೇಟೆಂಟ್‌ಗೆ ಕಾಯುತ್ತಿವೆಯೆಂಬುದು ಗಮನಾರ್ಹ.

ಅಮೆರಿಕದಲ್ಲಿ ಸ್ವಾಮಿಯವರಿಗೆ ಕೈತುಂಬಾ ಹಣ ಬರುವಂಥ ನೌಕರಿ, ಸ್ಥಾನಮಾನ, ಅಂತಸ್ತು, ಅಂತಸ್ತಿನ ಮನೆ, ಕಾರು, ನೆಮ್ಮದಿ, ಐಷಾರಾಮಿ ಜೀವನ ಎಲ್ಲವೂ ಇತ್ತು. ಆದರೆ ಅವೆಲ್ಲವುಗಳನ್ನೂ ಬಿಟ್ಟು ಅವರು ಊರಿಗೆ ಬಂದಿದ್ದಾರೆ. ಕಳೆದ ಏಳೆಂಟು ತಿಂಗಳಿನಿಂದ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಎರಡು ವರ್ಷಗಳ ಹಿಂದೆ ಅಮೆರಿಕದ ಬಾಲ್ಟಿಮೋರ್‌ನಲ್ಲಿ ಸಿಕ್ಕಾಗ ಇಂಥ ಯಾವ ಸೂಚನೆಯನ್ನು ಸಹ ಕೊಡದ ಸ್ವಾಮಿಯವರನ್ನು ''ನಿಮ್ಮ ವೃತ್ತಿಜೀವನದ ಅತ್ಯಂತ ಉತ್ತುಂಗದ ಸ್ಥಿತಿಯಲ್ಲಿರುವಾಗ, ಈ ನಿರ್ಣಯವನ್ನೇಕೆ ತೆಗೆದುಕೊಂಡಿರಿ?'' ಎಂದು ಕೇಳಿದೆ. ಅದಕ್ಕೆ ಸ್ವಾಮಿ ಹೇಳಿದರು- ''ನಾನು ಅಮೆರಿಕದಲ್ಲಿದ್ದಾಗ ನನ್ನ ಮನಸ್ಸು ಸದಾ ನನ್ನ ಊರು, ನನ್ನ ಜನರ ಮಧ್ಯದಲ್ಲೇ ಇರುತ್ತಿತ್ತು. ನಾವೆಲ್ಲ ಒಂದೇ ಕಾಲಘಟ್ಟ ಹಾಗೂ ಒಂದೇ ಗ್ರಹದಲ್ಲಿ ವಾಸಿಸುತ್ತಿದ್ದರೂ ಅಮೆರಿಕಕ್ಕೆ ಮಾತ್ರ ನಮಗಿಂತ ಮುಂದುವರಿಯಲು ಸಾಧ್ಯವಾದರೆ, ನಾವೇಕೆ ಹಿಂದುಳಿಯಬೇಕು ಎಂಬುದು ಈಗಲೂ ನನ್ನನ್ನು ಕಾಡುತ್ತಿದೆ. ವಿಜ್ಞಾನ ಹಾಗೂ ತಂತ್ರಜ್ಞಾನ ಭಾರತದ ಹಳ್ಳಿಹಳ್ಳಿಯ ರೈತರಿಗೆ ತಲುಪಿಲ್ಲವೆಂಬುದು ರೈತಕುಟುಂಬದಿಂದ ಬಂದ ನನಗೆ ಇನ್ನೂ ಕಾಡುವ ಪ್ರಶ್ನೆ. ಬೇರೆಯವರು ಉತ್ತಮ ಜೀವನ ಸಾಗಿಸುತ್ತಿದ್ದರೆ ನಮ್ಮ ರಾಜ್ಯ, ಜಿಲ್ಲೆ, ಊರಿನ ಜನರೇಕೆ ಅಭಿವೃದ್ಧಿಯಿಂದ ವಂಚಿತರಾಗಬೇಕು? ಈ ದಿಸೆಯಲ್ಲಿ ಬರೀ ಮಾತಾಡುವ ಬದಲು ನಾನೇನು ಮಾಡಬಹುದೆಂದು ಯೋಚಿಸಿ, ರಾಜಕೀಯ ಸೇರುವ ನಿರ್ಧಾರ ತೆಗೆದುಕೊಂಡೆ. ರಾಜಕೀಯ ಸಮಾಜವನ್ನು ಆವರಿಸಿಕೊಂಡಿರುವ ಅತ್ಯಂತ ಪ್ರಭಾವಿ ಕ್ಷೇತ್ರ. ಹೀಗಾಗಿ ಇದನ್ನೇ ಆಯ್ಕೆ ಮಾಡಿಕೊಂಡೆ.''

''ಚುನಾವಣೆಗೆ ನಿಲ್ತೀರಾ? ಟಿಕೆಟ್ ಸಿಗುತ್ತಾ? ಒಂದು ವೇಳೆ ಸಿಗದಿದ್ದರೆ ಭ್ರಮನಿರಸನಗೊಳ್ಳುತ್ತೀರಾ?'' ಎಂದು ಕೇಳಿದ್ದಕ್ಕೆ ಸ್ವಾಮಿ ಹೇಳಿದರು- ''ಬಿಜೆಪಿ ಅಭ್ಯರ್ಥಿಯಾಗಿ ಚಿತ್ರದುರ್ಗ(ಮೀಸಲು)ದಿಂದ ಸ್ಪರ್ಧಿಸಬೇಕೆಂದಿದ್ದೇನೆ. ಸ್ಥಳೀಯ ಕಾರ್ಯಕರ್ತರು, ನಾಯಕರು, ರಾಜ್ಯದ ಧುರೀಣರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ನನ್ನ ಹಿನ್ನೆಲೆ, ವಿದ್ಯಾರ್ಹತೆ, ಅನುಭವವನ್ನು ಗುರುತಿಸಿ ನನಗೆ ಅವಕಾಶ ಕೊಡುತ್ತಾರೆಂಬ ಭರವಸೆಯಿದೆ.''

ಚಿತ್ರದುರ್ಗ ತಾಲೂಕಿನ ಕಳ್ಳಿಹಟ್ಟಿ ಎಂಬ ಕುಗ್ರಾಮದಲ್ಲಿ ಜನಿಸಿದ ಸ್ವಾಮಿ, ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಸರಕಾರಿ ಶಾಲೆಗಳಲ್ಲಿ ಮುಗಿಸಿದರು. ದಾವಣಗೆರೆಯ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಲೆಕ್ಟ್ರಿಕಲ್ ಕಮ್ಯುನಿಕೇಷನ್‌ನಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದರು.

ನಲವತ್ತೊಂದು ವರ್ಷ ವಯಸ್ಸಿನ ಜನಾರ್ಧನ ಸ್ವಾಮಿ ಹಲವು ಆಸೆ, ಕನಸುಗಳನ್ನು ಹೊತ್ತು ಭಾರತಕ್ಕೆ ಬಂದಿದ್ದಾರೆ. ಖಂಡಿತವಾಗಿಯೂ ಅವರಂಥ ಯೋಗ್ಯ, ಸಂಭಾವಿತ, ಸಮರ್ಥ ವ್ಯಕ್ತಿಯನ್ನು ಯಾವುದೇ ಪಕ್ಷವಾದರೂ ಈ ಸಂದರ್ಭದಲ್ಲಿ ಬರಮಾಡಿಕೊಳ್ಳಬೇಕು. ಅದರಲ್ಲೂ ಸ್ವಾಮಿಯವರಂಥ ಉತ್ಸಾಹಿ, ಅನುಭವಿ ಯುವಕರು ಬಿಜೆಪಿಯೆಡೆ ಮುಖ ಮಾಡಿರುವುದು ಇವರದ್ದಲ್ಲ, ಆ ಪಕ್ಷದ ಸುಯೋಗ. ಸ್ವಾಮಿಯವರಿಗೆ ಟಿಕೆಟ್ ನೀಡಿದರೆ ಅಮೆರಿಕದಲ್ಲಿರುವ ಲಕ್ಷಾಂತರ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಬಿಜೆಪಿ ಒಂದು ಸಂದೇಶ ಕಳಿಸಿದಂತಾಗುತ್ತದೆ. ಡಾಕ್ಟರು, ಎಂಜಿನಿಯರ್‌ಗಳು, ಯೋಗ್ಯರು ರಾಜಕೀಯಕ್ಕೆ ಬರಬೇಕೆಂಬುದು ಕೇವಲ ಶುಷ್ಕ ಮಾತಾಗಬಾರದು. ಆರಿಸುವುದು, ಬಿಡುವುದು ಜನರಿಗೆ ಬಿಟ್ಟ ವಿಚಾರ ಬಿಡಿ.

ಬಿಜೆಪಿ ನಾಯಕರು ಮುಂದಿನ ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲು ಕುಳಿತುಕೊಳ್ಳುತ್ತಿದ್ದಾರೆ. ಜನಾರ್ಧನ ಸ್ವಾಮಿಯಂಥವರಿಗೆ (ಮೊಬೈಲ್: 99166-63054, ವೆಬ್‌ಸೈಟ್: www.jswamy.com) ನಿರಾಸೆ ಆಗದಿರಲಿ ಎಂಬುದಷ್ಟೇ ಆಶಯ.